ಸಿನ್ಮ ಹಾಕ್ಯಾರ ಬಾ' ಅಂತ ಕರಕಂಡು ಹೋಗಿದ್ರು. ಮಾರೆಮ್ಮಗ ಎಷ್ಟನ್ನ ದುಡೀಲಿ ರಕ್ಕದ ಲೆಕ್ಕ ತಿಳಿತಿರಲಿಲ್ಲ. ಗಂಡನ ಸಲುವಾಗಿ ಸಾಕಾಗಿ ಎಲ್ಲಿ ಎಷ್ಟು ರಕ್ಕ ಇಟ್ಟೀನಿ ಅಂತ ನೆನಪಿರ್ತಿರಲಿಲ್ಲ. ಬಳೆಕೈಗಿ ಒಂದಿಷ್ಟು ಸಿಗಿಸಿಕೊಂಡಿರತಾಳ, ಸೀರೆ ನಿಲಗಿಗೆ ಅರ್ಧ ಗಾಂಧಿ ಕಾಣಂಗ ನಿಲ್ಲಿಸಿರತಾಳ, ಜ್ವಾಳದ ಚೀಲ, ಅಕ್ಕಿ ಚೀಲ, ಹಿಟ್ಟಿನ್ಯಾಗ ಹೀಂಗ ಎಲ್ಲಿಬೇಕಲ್ಲಿ ಇಟ್ಟು ಬಿಟ್ಟಿರುತ್ತಿದ್ದಳು. ಮೊನ್ನೆ ರಾತ್ರಿ ಹೊತ್ತು ಮುಣಗಾಕ ಬಂದಿತ್ತು. ಮಾರೆಮ್ಮನ ಹೊಟ್ಟಿಗೆ ಅಂಟಿಕೊಂಡು ಹಲಾಯಿ ದೇವ್ರು ನಿಂತಗ ನಿಂತಿದ್ದ ಐವತ್ತು ರೂಪಾಯಿ ನೋಟು ಅವಳೆಪ್ಪಗ, 'ಬಾ ನನ್ನ ಎಳಕಾ... ಬಾ ನನ್ನ ಎಳಕಾ..' ಅಂದಂಗಾಗುತ್ತಿತ್ತು. ಆವಾಗ ಮನಸಿನ್ಯಾಗ, 'ರಾತ್ರಿ ಬರತೀನಿ... ಎಳಿತೀನಿ... ಅಲ್ಲಿತನ ಅದೇ ಜಾಗದಾಗಿರು' ಅಂತ ಕಳಬುರಿಸಿದ. 'ಏನಾ ಕಳಬುರಸಾಕತ್ತೀಯಲ್ಲ ಹರಿಷ್ಟಾ?' ಅಂದು ಒಂದೇಟು ತಲಿಗೆ ಕುಟ್ಟಿದಳು. ವತ್ಮುಣಗತಾನ ಹುದುಗು ಹಾಕಿದ್ದ ಕೋಳಿ ಕುಂತಂಗ ಕುಂತಿದ್ದ.ರಾತ್ರಿಮಾರೆಮ್ಮನಗೊರಕಿಸದ್ದುಕೇಳಿಇನ್ನ್ಯಾಕೆ ಎಚ್ಚರಾಗಲ್ಲಂತ ಗೊತ್ತಿದ್ದು, ಹೊಟ್ಟೆಗಂಟಿಕೊಂಡು ನಿಂತಿದ್ದ ಹಲಾಯಿದೇವ್ರನ್ನ ಬೊಳ್ಳಿಗೆ ಸಿಗಿಸಿಕೊಂಡು ಮೆಲ್ಲಕ ಕಿತ್ತಿದ. ಅವೇ ಐವತ್ತುರೂಪಾಯಿ, 'ಎ' ಸಿನ್ಮ ನೋಡಾಕ ರೆಡಿ ಮಾಡಿಕೊಂಡ ಮುಂಜಾನೆ ಹೊರಟ. ಬಸ್ಸಿನ್ಯಾಗ ದ್ಯಾವಣ್ಣ ಮಾವ, 'ಎ ಸಿನ್ಮ ಅಂದರ ಯಂಗಿರತಾವ?' ಅಂದಾಗ, 'ಅವಲ್ಯಾ ನೀನು ನೋಡಂದೆ ನೋಡಲೇ ಒಂದು ಸಲ ನೋಡಿದೆಂದ್ರ ದಿನಾದಿನಾ ಸಿನ್ಮೂರಿಗೆ ಬರಂಗಾಗುತ್ತ' ಅಂತ ದ್ಯಾವಣ್ಣ ಬಹಳ ಠೀವಿಲೆ ಉತ್ತರಕೊಟ್ಟ. ಆ ಸಿನ್ಮ ನೋಡಿ ಮನಿಗಿ ಬಂದು ಅದೇ ಚಾಳಿ ಮುಂದುವರೆಸಿದಾಗ ಮಾರೆಮ್ಮ ಸಿಟ್ಟಿಗೇರಿ ಜುಟ್ಟು ಹಿಡಿದು, 'ಬಿದ್ದ ನನ್ನ ನಾಟ್ಯಾ ಆ ಮುದೇನಾಗ್ಯಾನಲ್ಲ ದ್ಯಾವ, ಅಗಸರೋನ ಮಾತು ಕೇಳಿ, ಸಿನ್ಮ ನೋಡಿ ಬಂದು ಹುಚ್ಚಬಂದೋರು ಮಾಡಿದಂಗ ಮಾಡತಿರೆನಲೋ? ಹುಚ್ಚುನಾಯಿಗುಳೇ...' ಅಂತ ತಲ್ಯಾಗ ಕೂದ್ಲ ಹಿಡಿದು ಬರೇಬಂಡಿಗೆ ಕುಟ್ಟಿದ್ದಳು. ಹಣೆ ಗೂಟೆ ಕಾತಿತ್ತು. ಗೂಟೆ ಕಾತ ಜಾಗವನ್ನು ಮುಟಿಕ್ಯಾಂತ ಕುಂತಿದ್ದ ಅವಳೆಪ್ಪ, 'ನಮಗ ಪತ್ತೇವು ಹೇಳ್ಯಾರ. ಇನ್ನ್ಯಾಕ ಅಂತ ಸಿನ್ಮಾನ ನೋಡಬಾರದಪ್ಪೋ!!' ಅಂತ ತೀರ್ಮಾನ ಮಾಡಿದ. ಮಾರೆಮ್ಮ ಎರಡು ಹೆಣ್ಣನ್ನ ಬಚ್ಚಲದಾಗ ಮೈ ತೊಳಕಾಂತ ಕುಂತಿದ್ದಳು. ಅವಳೆಪ್ಪ ಅದೇ ಹೊರಗಡೆ ಒಣಚಿಂತೆ ಮಾಡಿಕೊಂತ ಕುಳಿತಿದ್ದ. ಮೇಲ್ಗಡೆ ಶರಣ ಮೆಲ್ಲಕ ಬೆಕ್ಕು ಬಂದಂಗ ಅಂಜಿ ಅಂಜಿ ಅವಳೆಪ್ಪನ ಸೆನೇಪು ಬಂದು ಕಿವ್ಯಾಗ, 'ಹೇ ಯಣ್ಣಾ ಓಸಿ ನಂಬರ್ ನೋಡಾಕ ದೊಡ್ಡ ರೂಟಗಾರ ಯದ್ದಲದಡ್ಡಿ ಗೋಯಿಂದರಾಜ ಬರ್ತಾನಂತ ಪಾತಪ್ಪನ ಕಟ್ಟಿಗೆ ಬಾ' ಅಂತ ಕೈ ಸನ್ನೆ ಮಾಡಿದ. ಅವಳೆಪ್ಪನ ಕಿವಿ ನಿಗುರಿದವು. 'ತಡೆಲೇ ಇವಳ ಹೊಲಕಂದೇ ಹೋಗ್ಲಿ ಬರತೀನಿ' ಅಂದು ಶರಣನನ್ನ ಕಳುಹಿಸಿದ. ಗೋಯಿಂದರಾಜ ಪುಣ್ಯಾತ್ಮ ಯಾವದನ್ನ ಒಂದು ನಂಬರು ಹಿಡಕೊಟ್ಟರ ಕೈಗಡ, ಬಾಯಿಗಡ ಮುಟ್ಟತಾವ ಅಂತ ಮನಸ್ಸಿನೊಳಗೆ ಭರವಸೆಯಿಂದ ಹಿಗ್ಗಿದ. ಮಾರೆಮ್ಮ ಹೋಲಕ್ಕೋಗದನ್ನೇ ಕಾಯುತ್ತ ಕುಳಿತ. ಕೊನೆಗೆ ಆ ಗಳಿಗೆ ಬಂದಿತು.

* * *

ಓಸಿಯ ದೊಡ್ಡ ರೂಟಗಾರ ಯದ್ದಲದಡ್ಡಿ ಗೋವಿಂದರಾಜ ಪಾತಪ್ಪನ ಕಟ್ಟೆಮೇಲೆ ತಾಡಪಾಲು ಅದರ ಮೇಲೆ ಓಸಿ ಚಾಟು ಹಾಸಿಕೊಂಡು ಕುಳಿತಿದ್ದ. ಆತನ ಸುತ್ತಮುತ್ತ ಕೊಬರಿದಾಸ್, ಬ್ಯಾಳೆ ಯಲ್ಲಪ್ಪ, ದೊಡ್ಡ ಕರಿಯಪ್ಪ, ಬಡ್ಡೆನೋರು ಅಂಬ್ಲಾ, ಮೇಲ್ಗಡೆ ಶರಣ ಅವರ ಜೊತೆಗಿ ಅವಳೆಪ್ಪ ಕುಂತಿದ್ದ. ಗೋವಿಂದರಾಜ ಬಾಳೇನು ಓದಿಲ್ಲ ಆದ್ರ ಅಂಕಿಸಂಖ್ಯೆಯೊಂದಿಗೆ ಚಕ್ಕಂದ ಆಡುತ್ತಿದ್ದ. ಓಸಿಯ ಬಗ್ಗೆ ಸ್ವಲ್ಪ ಸ್ವಲ್ಪ ಅದರ ಗಂಧ-ಗಾಳಿ ಅವಳೆಪ್ಪನಿಗಿಂತ ಉಳಿದವರಿಗೆ ಗೊತ್ತಿತ್ತು. ಅವಳೆಪ್ಪ ಕನಸು ಬಿದ್ದರಷ್ಟೆ ನಂಬರ್ ಆಡುತ್ತಿದ್ದ. ಓಸಿಯ ನಂಬರಿನ ಜನ್ಮ ಜಾಲಾಡಿದ್ದ ಗೋವಿಂದರಾಜ ಓಸಿಯಲ್ಲಿ ನಾನೆಷ್ಟು ತಿಳಕೊಂಡಿದ್ದೇನೆ ಎಂದು ತಿಳಿಸಲು ಸತತ ಪ್ರಯತ್ನ ಮಾಡುತ್ತಿದ್ದ. ಬಹುತೇಕ ಓಸಿ ರೂಟು ಹಿಡಿಯೋರು ಅಲ್ಪಸ್ವಲ್ಪ ಶಾಲೆಯನ್ನು ಓದಿಕೊಂಡಿರುತ್ತಾರೆ. ಅಂತಹದರಲ್ಲಿ ಗೋವಿಂದರಾಜ ಒಬ್ಬ. ಒಂದು ಬಾಟಲಿ ಕೊಡಿಸಿದರ ಅದರ ಬುನಾದಿನ ಉಲ್ಟಾಪಲ್ಟಾ ಮಾಡಿಬಿಡುತ್ತಿದ್ದ. ಗೋವಿಂದರಾಜು ತನ್ನ ಮುಂದೆ ಓಸಿ ಚಾಟು ಇಟ್ಕೊಂಡು ಕೈಯಲ್ಲಿ ಪೆನ್ನನ್ನ ಬಿದ್ರು ಬಡಿಗಿ ತಿರಗಿಸಿದಂಗ ಐದು ಬಳ್ಳಿನ್ಯಾಗ ಗಿರಗಿರ ತಿರಿಗಿಸೋದನ್ನ ಅವಳೆಪ್ಪ ಬಾಯಿ ತೆರಕಂಡು ನೋಡಿದ. ಮತ್ತೊಂದು ಸಲ ಪುಣ್ಯದಿಂದ ಇವತ್ತೇನಾದ್ರೂ ನಂಬರೆ ಸಿಕ್ರ, ಅಲ್ಲಲ್ಲಿ ಇಸಗಂಡ ಕೈಗಡ ಮುಟ್ಟತಾವ ಅಂತ ಮನಸಿನೊಳಗಡೆ